

ಯೋಜನೆಗಳನ್ನು ರೂಪಿಸಿಕೊಂಡು ನಿರ್ಮಾಣ ಕಾರ್ಯಗಳನ್ನು ಮಾಡಬೇಕು ಎಂದು ಸ್ಥಳೀಯ ಸರ್ಕಾರಗಳಲ್ಲಿ ಜಾಗೃತಿ ಮೂಡಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಇದಕ್ಕೆ ಯು.ಎನ್. ಹ್ಯಾಬಿಟ್ಯಾಟ್ ಸಂಸ್ಥೆಯೂ ಕೈ ಜೋಡಿಸಿದೆ.

ಕೆನಡಾ, ಬ್ರೆಜಿಲ್, ಸ್ಪೇನ್, ಬ್ರಿಟನ್, ಜರ್ಮನಿ, ಫ್ರಾನ್ಸ್, ಫಿನ್ಲೆಂಡ್, ಬೆಲಾರಸ್, ಉಕ್ರೇನ್, ಟರ್ಕಿ, ಯುಎಇ, ಸೌದಿ ಅರೇಬಿಯಾ, ಇಟಲಿ, ಆಸ್ಟ್ರಿಯಾ, ಜರ್ಮನಿ, ಬ್ರೆಜಿಲ್, ಮೊಜಾಂಬಿಕ್, ಸ್ವಿಟ್ಜರ್ಲೆಂಡ್, ನ್ಯೂಜಿಲೆಂಡ್, ಮಂಗೋಲಿಯಾ, ದೇಶಗಳ ಕೆಲವು ನಗರಗಳನ್ನು ಮಕ್ಕಳ ಸ್ನೇಹಿಯಾಗಿ ಯುನಿಸೆಫ್ ರೂಪಿಸಿದೆ. 2030ರ ಹೊತ್ತಿಗೆ ಕನಿಷ್ಠ 160 ದೇಶಗಳ ಪ್ರಮುಖ ನಗರಗಳನ್ನು ಮಕ್ಕಳ ಸ್ನೇಹಿಯಾಗಿ ಮಾಡುವುದು ಯುನಿಸೆಫ್ ಗುರಿ.

## ನಗರ ಜೀವನವೇ ದುರಂತ

ಪ್ರಸ್ತುತ ಬಹುತೇಕ ಜನ ನಗರ ಪ್ರದೇಶಗಳತ್ತ ಮುಖ ಮಾಡುತ್ತಿದ್ದಾರೆ. ವಿಶ್ವಾದಾದ್ಯಂತ ಸುಮಾರು 400 ಕೋಟಿ ಮಂದಿ ನಗರ ಪ್ರದೇಶಗಳಲ್ಲೇ ವಾಸಿಸುತ್ತಿದ್ದಾರೆ. 2050ರ ಹೊತ್ತಿಗೆ ಶೇ. 70ರಷ್ಟು ಜನ ನಗರ ಪ್ರದೇಶಗಳಲ್ಲೇ ವಾಸಿಸಲಿದ್ದಾರೆ. ಇಕ್ಕಟ್ಟಾದ ವಾತಾವರಣದಲ್ಲಿ ಮಕ್ಕಳು ಮುಕ್ತವಾಗಿ ಬೆಳೆಯುವ ಅವಕಾಶಗಳು ಕಡಿಮೆ. ಅದರಲ್ಲೂ ಹೆಚ್ಚಿನ ಮಕ್ಕಳು ಮೂಲಸೌಕರ್ಯ ವಂಚಿತ ಕೊಳೆಗೇರಿ ಪ್ರದೇಶಗಳಿಗೆ ಸೀಮಿತವಾಗುವ ಸಾಧ್ಯತೆ ಇದೆ. ಹೀಗಾಗಿ ನಗರ ಪ್ರದೇಶಗಳನ್ನು ಅಭಿವೃದ್ಧಿ ಮಾಡುತ್ತಾ ಮಕ್ಕಳಿಗೆ ಉತ್ತಮ ಭವಿಷ್ಯ ಕಟ್ಟಿಕೊಡುವ ಪ್ರಯತ್ನ ಮಾಡಬೇಕಿದೆ.

## ಏನಿದು ಮಕ್ಕಳ ಸ್ನೇಹಿ ನಗರ?

- ನಗರದಲ್ಲಿ ಮಕ್ಕಳನ್ನು ಹಿಂಸಿಸುವ ಮತ್ತು ದೂಷಿಸುವ ವಾತಾವರಣ ನಿರ್ಮೂಲನೆ ಮಾಡಬೇಕು.
- ಮಕ್ಕಳು ತಮ್ಮ ಜೀವನ ಕಟ್ಟಿಕೊಳ್ಳಲು ಬಾಲ್ಯದಿಂದಲೇ ಎಲ್ಲ ಸೌಕರ್ಯಗಳನ್ನು ಒದಗಿಸಬೇಕು.
- ಮಕ್ಕಳ ಶಿಕ್ಷಣ ಹಾಗೂ ಕೌಶಲಾಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು.
- ಮಕ್ಕಳ ಭಾವನೆಗಳಿಗೆ ಸ್ಪಂದಿಸಿ ನೀತಿ–ನಿರ್ಧಾರ ರೂಪಿಸುವುದು.
- ನಗರ, ಸಮುದಾಯ ಮತ್ತು ಸಾಮಾಜಿಕ ಜೀವನದಲ್ಲಿ ಪ್ರತಿ ಮಗು ಬೆರೆಯುವಂತೆ ನೋಡಿಕೊಳ್ಳುವುದು
- ಮಕ್ಕಳಿಗಾಗಿ ಸುರಕ್ಷಿತ ಮತ್ತು ಭಯಮುಕ್ತ ವಾತಾವರಣ ನಿರ್ಮಿಸುವುದು. ಹಸಿರು ಪರಿಸರವನ್ನು ಸೃಷ್ಟಿಸುವುದು.
- ಸ್ನೇಹಿತರನ್ನು ನಿತ್ಯ ಭೇಟಿ ಮಾಡಿ ಅವರೊಂದಿಗೆ ನಲಿಯುವುದಕ್ಕೆ ಮತ್ತು ವಿವಿಧ ಬಗೆಯ ಆಟಗಳನ್ನು ಆಡುವುದಕ್ಕೆ ಅವಕಾಶ ಕಲ್ಪಿಸಿ, ಅದಕ್ಕೆ ತಕ್ಕಂತೆ ವಾತಾವರಣ ನಿರ್ಮಿಸುವುದು.
- ಮೂಲ (ಜಾತಿ), ಧರ್ಮ, ಆದಾಯ ಮತ್ತು ಲಿಂಗದ ಆಧಾರದ ಮೇಲೆ ಯಾವುದೇ ಅಭದ್ರತಾ ಭಾವನೆ ಕಾಡದಂತೆ ನೋಡಿಕೊಳ್ಳುವುದು.

ಈ ಎಲ್ಲಾ ಅಂಶಗಳು ನಗರ, ಪಟ್ಟಣ ಮತ್ತು ಸಮುದಾಯಗಳಲ್ಲಿ ಕಾರ್ಯರೂಪಕ್ಕೆ ಬರಬೇಕಾದರೆ, ಸ್ಥಳೀಯ ಸರ್ಕಾರ, ಸಮಾಜ ಸೇವಾ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಮಾಧ್ಯಮ ತಮ್ಮ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸಬೇಕು.

## ಏಕೆ ಬೇಕು ಮಕ್ಕಳ ಸ್ನೇಹಿ ನಗರ?

ಮಕ್ಕಳು ಸದಾ ಇನ್ನೊಬ್ಬರನ್ನು ಅವಲಂಬಿಸಿರುತ್ತಾರೆ ಹೀಗಾಗಿ ಅವರ ಅಭ್ಯುದಯವೇ ಎಲ್ಲರ ಧ್ಯೇಯವಾಗಬೇಕು ಎಂಬುದು ಯುನಿಸೆಫ್ ಕಾಳಜಿ.

ಇದಕ್ಕಾಗಿಯೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಯೋಜನೆ ಸಾಕಾರಗೊಳಿಸಲು ಶ್ರಮಿಸುತ್ತಿದೆ. ಇವಷ್ಟೇ ಅಲ್ಲದೇ ಇನ್ನೂ ಹಲವು ಕಾರಣಗಳನ್ನು ಯುನಿಸೆಫ್ ಪಟ್ಟಿ ಮಾಡಿದೆ.

- ಬಹುತೇಕರು ತಮ್ಮ ಮಕ್ಕಳನ್ನು ಮುಂದಿನ ಆಸ್ತಿ ಮತ್ತು ದೇಶದ ಸಂಪತ್ತು ಎಂದು ಭಾವಿಸಿಯೇ ಬೆಳೆಸುತ್ತಿದ್ದಾರೆ. ಹೀಗಾಗಿ ಅವರನ್ನು ಚಿಕ್ಕಂದಿನಿಂದಲೇ ಹಲವು ಒತ್ತಡಗಳಿಗೆ ಸಿಲುಕಿಸುತ್ತಿದ್ದಾರೆ.
- ಮಕ್ಕಳು ತಮ್ಮ ಜೀವನ ನಿರ್ವಹಣೆಗೆ ಇತರರ ಮೇಲೆ ಅವಲಂಬಿಸಬೇಕಾದ ಅನಿವಾರ್ಯತೆ ಇದೆ.
- ಹಲವು ದೇಶಗಳಲ್ಲಿ ಕಾರ್ಯರೂಪಕ್ಕೆ ಬರುತ್ತಿರುವ ವಿವಿಧ ಯೋಜನೆಗಳು ಮಕ್ಕಳ ಬೆಳವಣಿಗೆಗೆ ಮಾರಕವಾಗಿವೆ.
- ಹಲವು ದೇಶಗಳ ರಾಜಕೀಯ ವ್ಯವಸ್ಥೆಯಲ್ಲಿ ಮಕ್ಕಳಿಗೆ ಸಂಬಂಧಿಸಿದ ಬೇಡಿಕೆಗಳ ಬಗ್ಗೆ ಆಗಲಿ, ಅವರ ಭಾವನೆಗಳ ಬಗ್ಗೆ ಆಗಲಿ ಸ್ಪಂದಿಸುವ ಗುಣ ಇಲ್ಲದಿರುವುದು.
- ಸಮಾಜದಲ್ಲಿ ಆಗುತ್ತಿರುವ ಹಲವು ಬದಲಾವಣೆಗಳು ಮಕ್ಕಳ ಮೇಲೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನಕಾರಾತ್ಮಕ ಪರಿಣಾಮ ಬೀರುತ್ತಿರುವುದು.